ಪ್ಲಾನ್ ಪ್ರಕಾರ ಪೂರ್ಣ ಮಾಡುವ ಬಗ್ಗೆ.

ಆ) ಸವದತ್ತಿ ತಾಲ್ಲೂಕಿನಲ್ಲಿರುವ ಚಿಕ್ಕೊಪ್ಪ ಹಿರಕೊಪ್ಪ ಗ್ರಾಮಗಳ ಸಂಯೋಜಿತ ಕೊಳವೆ ನೀರು ಸರಬರಾಜು ಯೋಜನೆ ತೆಗೆದುಕೊಳ್ಳುವ ಬಗ್ಗೆ.

ಇ) ರುದ್ರಾಪುರ ಕಾರೀಮನಿ ಮತ್ತು ದುಂಡನಕೊಪ್ಪ ಗ್ರಾಮಗಳ ಸಂಯೋಜಿತ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳುವ ಬಗ್ಗೆ.

ಈ) ನೇಸರಗಿ ಗ್ರಾಮದ ಶಾಲಾ ಕಟ್ಟಡವನ್ನು ಆರ್ಕಿಟೆಕ್ಟ್ ಪ್ಲಾನ್ ಪ್ರಕಾರ ಕಟ್ಟುವ ಬಗ್ಗೆ.

ಶ್ರೀ ಅಜಯಕುಮಾರ್ ಸರನಾಯಕ್ :- ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಹೆಸರಿನಲ್ಲಿರುವ ಈ ಕೆಳಕಂಡ ಅರ್ಜಿಗಳನ್ನು ಅರ್ಜಿಗಳ ಸಮಿತಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅ) ದಾವಣಗೆರೆ ತಾಲ್ಲೂಕು, ಮಾಯಕೊಂಡ ಗ್ರಾಮದಲ್ಲಿ ಕಿರಿಯ ಕಾಲೇಜು ಕಟ್ಟಡ ಕಟ್ಟುವ ಬಗ್ಗೆ.

ಆ) ದಾವಣಗೆರೆ ತಾಲ್ಲೂಕು, ಆನುಗೋಡು ಸಂರಕ್ಷಿತ ಅರಣ್ಯ ಪ್ರದೇಶಗಲ್ಲಿ ಪ್ರಾಣಿ ಸಂಗ್ರಹಾಲಯ ತೆರೆಯುವ ಬಗ್ಗೆ.

ಇ) ದಾವಣಗೆರೆ ತಾಲ್ಲೂಕಿನ ಹಡದಿ ರಸ್ತೆಯನ್ನು ಹಾಗೂ ಬಾಡಾ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ.

ಈ) ದಾವಣಗೆರೆ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ತಿನ ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗದಿರುವ ಬಗ್ಗೆ ಅರ್ಜಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು :- ಅರ್ಜಿಗಳನ್ನು ಸ್ವೀಕರಿಸಲಾಯಿತು.

ವರದಿಯನ್ನು ಒಪ್ಪಿಸುವುದು.

ಶ್ರೀ ಕೆ.ಕುಶಾಲ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಕರ್ನಾಟಕ ವಿಧಾನಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ 1991-92ನೇ ಸಾಲಿನ 9ನೇ ವಿಧಾನ ಸಭೆಯ 2ನೇ ವರದಿಯ ರಾಜ್ಯ ಸರ್ಕಾರಿ ವಲಯದ ಉದ್ಯಮಗಳು, ನಿಗಮ , ಮಂಡಲಿ ಮತ್ತಿತರ ಸ್ವಾಯುತ್ತ ಸಂಸ್ಥೆಗಳ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಉದ್ಯೋಗ ಹಾಗೂ ಸೇವಾ ನೇಮಕಾತಿ ಮೀಸಲಾತಿ ಕುರಿತು 8ನೇ ವಿಧಾನಸಭೆಯ 2ನೇ ವರದಿಯಲ್ಲಿನ ಶಿಫಾರಸುಗಳ ಸಂಬಂಧದಲ್ಲಿ ಸರ್ಕಾರ ತೆಗೆದುಕೊಂಡು ಕಾರ್ಯಕ್ರಮದ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷಿಣಿಯವರು :- ವರದಿಯನ್ನೊಪ್ಪಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷಿಣಿಯವರೇ , ಈ ಸಭೆಯು ಇವತ್ತು ಮುಗಿಯುತ್ತದೆನ್ನತಕ್ಕಂಥ ಸೂಚನೆ ನಾನು ನಂಬಿಕೊಂಡಿಲ್ಲ. ಇದು ಒಂದು ಸೂಚನೆ, ಆದರೆ ಹಿಂದೆ ಬಿ.ಎ.ಸಿ.ಕಮಿಟಿಯಲ್ಲಿ ಸಭೆ ಸೇರಿದಾಗ ಸುಮಾರು 9-10ನೇ ತಾರೀಖಿನವರೆಗೆ ಸಭೆಯನ್ನು ನಡೆಸಬೇಕೆಂದು ಮೊದಲಿನ ಸಭೆಯಲ್ಲಿ ತೀರ್ಮಾನವಾಗಿತ್ತು. ಈ ಸಂದರ್ಭದಲ್ಲಿ ಕಾವೇರಿ ಬಗ್ಗೆ ಒಂದು ಸುದೀರ್ಘವಾದಂಥ ಚರ್ಚೆ ಈ ಸದನದಲ್ಲಿ ನಡೆಯಬೇಕೆನ್ನತಕ್ಕಂಥದ್ದನ್ನು ಸರ್ಕಾರ ಒಪ್ಪಿತ್ತು, ನಾವು ಒಪ್ಪಿದ್ದೆವು. ಇವತ್ತು ಸದನ ಏನಾದರೂ ಮುಂದೆ ಹೋಗುವುದಾದರೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ದಯವಿಟ್ಟು ಕಾವೇರಿಯ ವಿವಾದದ ಬಗ್ಗೆ ಒಂದು ಸಮಗ್ರವಾದ ಚರ್ಚೆಯಾಗಬೇಕು.

ಉಪಾಧ್ಯಕ್ಷಿಣಿಯವರು :- ಬಿ.ಎ.ಸಿ. ಮೀಟಿಂಗನ್ನು ಎರಡೂವರೆ ಗಂಟೆಗೆ ಇಟ್ಟುಕೊಳ್ಳಲಾಗುತ್ತದೆ. ಅದರ ನೋಟೀಸ್ ಈಗಾಗಲೇ ನಿಮಗೆ ಬರುತ್ತಿದೆ. ಅದರ ವಿಷಯ ಈಗ ಬೇಡ, ನಿಮಗೆಲ್ಲ ನೋಟೀಸ್ ಬರುತ್ತಿದೆ.